**ಓ.ಎಸ್‌ಃ 46/2015** **ಡಿ ಡಬ್ಲೂ–2 ಶಿವಣ್ಣ ಎಂ ಎಸ್**

ದಿನಾಂಕಃ 09.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟಿ ಸವಾಲುಃ ವಾದಿ ಪರ ಶ್ರೀ ಡಿ ಎಂ ಎಸ್ ವಕೀಲರಿಂದಃ**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರುತ್ತದೆ. ವಾದಿಯರು ಸಲ್ಲಿಸಿರುವ ದಾವೆ ಮತ್ತು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಗಳ ಸಂಬಂಧ ಮೂಲ ದಾಖಲಾತಿಗಳಾದ ಕೇತುವಾರು, ಪ್ರಿಲಿಮಿನರಿ ರೆಕಾರ್ಡ್ ಮತ್ತು ಟಿಪ್ಪಣಿ ಬಗ್ಗೆ ನನಗೆ ಗೊತ್ತು. ವಾದಿಯರು ಹಾಜರುಪಡಿಸಿರುವ ನಿಪಿ 1 ರ ದಾಖಲೆಯಲ್ಲಿ ದಾವಾ ಆಸ್ತಿಗಳು ವಾದಿಗಳ ತಾತನ ತಂದೆ ಬಲಗೈ ಕುಂಟರವರ ಹೆಸರಿನಲ್ಲಿ ಖಾತೆ ಇದೆ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಕೇತುವಾರು ದಾಖಲೆಯಲ್ಲಿ ದಾವಾ ಆಸ್ತಿಗಳು ವಾದಿಗಳ ತಾತ ಕಾಚಕ್ಕಿ ಮಾದಯ್ಯರವರ ಹೆಸರಿನಲ್ಲಿ ಖಾತೆ ಇದೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರಿಲಿಮಿನರಿ ರೆಕಾರ್ಡ್ ದಾಖಲೆಯಲ್ಲಿ ದಾವಾ ಆಸ್ತಿಗಳು ವಾದಿಗಳ ತಾತ ಕಾಚಕ್ಕಿ ಮಾದಯ್ಯರವರ ಹೆಸರಿನಲ್ಲಿ ಖಾತೆ ಇದೆ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕೇತುವಾರು, ಪ್ರಿಲಿಮಿನರಿ ರೆಕಾರ್ಡ್ ಮತ್ತು ಟಿಪ್ಪಣಿ ದಾಖಲೆಗಳಲ್ಲಿ ನಮ್ಮ ಪೂರ್ವಜರ ಹೆಸರು ನಮೂದಾಗಿಲ್ಲ ಎಂದರೆ ಸರಿ. ನಿಡಿ 15 ರ ದಾಖಲೆಯಲ್ಲಿ ನಮೂದಾಗಿರುವ ಕುಳ್ಳ ಎನ್ನುವವರು ನನ್ನ ಮುತ್ತಾತ. ನಾನು ಕುಳ್ಳ ಎನ್ನುವವರು ವಾರಸುದಾರ ಎನ್ನುವುದಕ್ಕೆ ದಾಖಲೆ ಇಲ್ಲ ಎಂದರೆ ಸರಿಯಲ್ಲ.

ವಾದಿಯರು ಕಾಚಕ್ಕಿ ಮಾದಯ್ಯನ ವಾರಸುದಾರರು ಎಂದರೆ ಸರಿ. ನಾವುಗಳು ಸಿದ್ದಯ್ಯನ ವಾರಸುದಾರರು ಎಂದರೆ ಸರಿ. ನಮಗೂ ವಾದಿಗಳಿಗೂ ಯಾವುದೇ ರಕ್ತ ಸಂಬಂಧ ಇಲ್ಲ ಎಂದರೆ ಸರಿ. ನನ್ನ ಮುತ್ತಾತ ಕುಳ್ಳರವರ ಹೆಸರಿಗೆ ಹೇಗೆ ಖಾತೆ ಆಯಿತು

ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಕಂದಾಯ ರಶೀದಿಗಳನ್ನು ವಾದಿಯರು ದಾವೆ ಸಲ್ಲಿಸಿದ ನಂತರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 20 ರಲ್ಲಿ ಹಿಸ್ಸೆ ಎಂದು ನಮೂದಾಗಿರುವ ಸಂಬಂಧ ಯಾವುದೇ ವಿಭಾಗ ಪತ್ರ ಇಲ್ಲ. 1ನೇ ಪ್ರತಿವಾದಿ ನನ್ನ ದೊಡ್ಡಪ್ಪ. ನನ್ನ ಪ್ರಮಾಣ ಪತ್ರದಲ್ಲಾಗಲಿ ಅಥವಾ ನನ್ನ ಪ್ರತಿವಾದಿ ಪತ್ರದಲ್ಲಾಗಲಿ ದಾವಾ ಆಸ್ತಿಯು ನನ್ನ ತಾತ ಬಸವಯ್ಯನವರಿಗೆ ಸೇರಿದೆ ಎಂದು ನಮೂದಿಸಿದೆ ಎಂದರೆ ಸಾಕ್ಷಿಯು ದಾಖಲೆ ಇದೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 100/1ಎ ರಲ್ಲಿ 1 ಎಕರೆ 20 ಗುಂಟೆ ಜಮೀನು ವಾದಿ 2 ರಿಂದ 8 ರವರ ತಾತ ಕಾಟಕ್ಕಿ ಮಾದಯ್ಯನಿಗೆ ಸೇರಿತ್ತು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳು ಸೃಷ್ಟಿ ಮಾಡಿರುವ ದಾಖಲಾತಿಗಳಾದ್ದರಿಂದ ಸರ್ವೇ ನಂಬರ್ 100/1ಎ ರಲ್ಲಿ 1 ಎಕರೆ 20 ಗುಂಟೆ ಜಮೀನಿಗೆ ನನಗಾಗಲಿ ನನ್ನ ಪೂರ್ವಜರಿಗಾಗಲಿ ಯಾವುದೇ ಮಾಲಿಕತ್ವದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮಲ್ಲಯ್ಯನಪುರ ಗ್ರಾಮದ ವರದನ ಮಗ ಮಾರ ಮತ್ತು ಮಾರನ ಮಗ ಮಾದ ಯಾರು ಎಂದು ನನಗೆ ಗೊತ್ತಿಲ್ಲ. ತಿಬ್ಬನ ಮಗ ಬಸವ ಯಾರು ಎಂದು ನನಗೆ ಗೊತ್ತಿಲ್ಲ. 1944 ರಲ್ಲಿ ತಿಬ್ಬನ ಮಗ ಬಸವ ರವರು ಸರ್ವೇ ನಂಬರ್ 79/2 ರ ಜಮೀನನ್ನು ಬೋಗ್ಯ ಮಾಡುವ ಸಮಯದಲ್ಲಿ ಸದರಿ ಜಮೀನಿನ ಪೂರ್ವಕ್ಕೆ ಕಾಟಕ್ಕಿ ಮಾದಯ್ಯನವರ ಜಮೀನು ಇದೆ ಎಂದು ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬಸವಯ್ಯನ ತಂದೆ ಯಾರು ಎಂಬುದರ ಸಂಬಂಧ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ಹೊರತುಪಡಿಸಿ ನನ್ನ ಬಳಿ ಕ್ರಯ ಪತ್ರಗಳು ಇರುವುದಿಲ್ಲ. ನನಗೆ ಸರ್ವೇ ನಂಬರ್ 100/1ಎ ರಲ್ಲಿ 1 ಎಕರೆ 20 ಗುಂಟೆ ಜಮೀನಿನ ಪೈಕಿ 1 ಎಕರೆ ಜಮೀನನ್ನು 15 ನೇ ಪ್ರತಿವಾದಿಗೆ ಮಾರಾಟ ಮಾಡಲು ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

ಸರ್ವೇ ನಂಬರ್ 100/1ಎ ರಲ್ಲಿ 1 ಎಕರೆ 20 ಗುಂಟೆ ಜಮೀನು ವಾದಿಯರ ತಾತ ಕಾಚಕ್ಕಿ ಮಾದಯ್ಯನಿಂದ ನಮ್ಮ ತಾತ ಬಸವಯ್ಯನವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಪಹಣಿ ಪತ್ರಿಕೆಯಲ್ಲಿ ನಮೂದಾಗಿರುವ ಆಧಾರದ ಮೇಲೆ ಸರ್ವೇ ನಂಬರ್ 100/1ಎ ರಲ್ಲಿ 1 ಎಕರೆ 20 ಗುಂಟೆ ಜಮೀನು ನನಗೆ ಸೇರಿದ್ದು ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಸರ್ವೇ ನಂಬರ್ 100/1ಎ ರಲ್ಲಿ 1 ಎಕರೆ 20 ಗುಂಟೆ ಜಮೀನಿನ ಸ್ವಾಧೀನವನ್ನು ನಮ್ಮ ಪೂರ್ವಜರಿಗೆ ವಹಿಸಿರುವ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ಪಹಣಿ ಪತ್ರಿಕೆಯ ಆಧಾರದ ಮೇಲೆ 15ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 100/1ಎ ರಲ್ಲಿ 1 ಎಕರೆ 20 ಗುಂಟೆ ಜಮೀನಿನಲ್ಲಿ ಯಾವುದೇ ಕಾಲದಲ್ಲಿ ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಗಳು ನನ್ನ ಹೆಸರಿನಲ್ಲಿ ಇರುವುದರಿಂದ ವಾದಿಯರ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನುಗಳು ವಾದಿಯರ ತಾತ ಕಾಚಕ್ಕಿ ಮಾದಯ್ಯನಿಗೆ ಸರ್ಕಾರದಿಂದ ಮಂಜೂರಾಗಿರುವುದರಿಂದ ದಾವಾ ಜಮೀನುಗಳಿಗೆ ವಾದಿಯರೇ ಮಾಲೀಕರು ಎಂದರೆ ಸರಿಯಲ್ಲ. ದಾವಾ ಜಮೀನುಗಳು ಚಾಮರಾಜನಗರದ ಸಿಟಿ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಬರುತ್ತವೆ ಎಂದರೆ ಸರಿ. ದಾವಾ ಜಮೀನುಗಳ ಬೆಲೆ ಜಾಸ್ತಿ ಆಗಿರುವುದರಿಂದ ಅವುಗಳನ್ನು ಕಬಳಿಸುವ ಸಲುವಾಗಿ ದಾಖಲಾತಿಗಳನ್ನು ಸೃಷ್ಟಿ ಮಾಡಿ ವಾದಿಯರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿರುವ 20 ಗುಂಟೆ ಜಮೀನಿನಲ್ಲಿ ಈಗಲೂ ವಾದಿಯರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಮತ್ತು ಪ್ರತಿವಾದಿ ಪತ್ರದಲ್ಲಿ ನಮೂದಿಸಿರುವ ವಿವರಗಳು ಎಲ್ಲವೂ ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.